SRI C. K. RAJAIAH SHETTY.—Supplementary to (a) : May I know the cost, whether you have given free of cost or whether you have fixed any price ?

SRI H. C. LINGA REDDY.—It is upset lease amount that has been fixed by the Deputy Commissioner, namely Rs. 200 per annum. It is not the cost of the land.

ಶ್ರೀ ಬಿ. ಭಾಸ್ಕರಶೆಟ್ಟಿ.—ವರ್ಷಕ್ಕೆ ೨೦೦ ರೂಪಾಯಿಗಳ ಪ್ರಕಾರ ಗೇಣಿಗೆ ಕೊಡಲಾಗಿದೆ ಎದು ಹೇಳಿದ್ದೀರಿ. ಎಷ್ಟು ವರ್ಷಕ್ಕೆ ಮತ್ತು ಯಾವ ಪರತ್ತಿನ ಮೇಲೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ಆಸ್ಪರೇಜ್ ಎಂಬುವವರಿಗೆ ೫೦ ವರ್ಷದ ಕಾಲದವರೆಗೆ ೨೦೦ ರೂಪಾಯಿಗಳ ಗೇಣಿಯ ಪ್ರಕಾರ ಸ್ಥಳವನ್ನು ವಿಾನುಪಡಿ ಮತ್ತು ಎಣ್ಣೆ ಕಂಪನಿ ಸ್ಥಾಪನೆಗೋಸ್ಕರ ವಾಗಿ ಕೊಡಲಾಗಿತ್ತು. ಅದೇ ಪರತ್ತಿನ ಮೇಲೆ ಇವರಿಗೂ ಕೊಡಲಾಗಿದೆ.

## ARREARS OF MEDICAL CONTRIBUTION DUE FROM LOCAL BODIES

378. SHI C. K. RAJAIAH SHETTY (Chicknaikanahalli).—Will the Minister for Health be pleased to state:—

(*a*) the arrears of Medical Contribution due to Government by Local Bodies as on 1-4-1966,

(*b*) the demand, collection and balance in the years 1966-67, 1967-68 and 1968-69 ;

(*c*) the action taken by the Government for collection of arrears ?

SRI A. G. BASAVANNAPPA (Deputy Minister for Health).—

(*a*) Rs. 1,21,77,525-15.

(*b*)—

| *Year* | *Demand* | *Collection* | *Balance* |
|---|---|---|---|
| | Rs. | Rs. | Rs. |
| 1966-67 | 1,47,94,046-33 | 26,16,521-18 | 121,77,525-15 |
| 1967-68 | 2,10,77,838-47 | 21,01,462-54 | 1,89,76,375-93 |
| 1968-69 | 2,15,57,130-91 | 8,45,293-27 | 2,07,11,837-64 |

(*c*) Steps have been taken for recovery of Medical Contribution.

SRI C. K. RAJAIAH SHETTY —Supplementary to (c) : The total arears due according to the figures given are Rs. 518 lakhs and odd. when two years ago a question was asked the same figure was given in

(Sri C. K. RAJAIAH SHETTY)

reply and still it is said that steps have been taken for recovery of arrears. May I know what are the exact steps taken ?

SRI G. BASAVANNAPPA.—The balance due is not Rs. 5 crores and odd, it is only Rs. 2 crores and odd. Necessary action has been taken to collect the arrears.

ಶ್ರೀ ಸಿದ್ದಯ್ಯ ಕಾಶೀಮಠ.—ಇಷ್ಟೊಂದು ಬಾಕಿಯನ್ನು ಸ್ಥಳೀಯ ಸಂಸ್ಥೆಗಳು ಕೊಡದಿರುವುದಕ್ಕೆ ಕಾರಣವೇನು ಮತ್ತು ವಸೂಲಿ ಮಾಡುವುದಕ್ಕೆ ಏನು ಕ್ರಮ ಕೈಕೊಳ್ಳಲಾಗಿದೆ?

ಶ್ರೀ ಜಿ. ಬಸವಣಪ್ಪ—ಪಂಚಾಯತಿ ಆಕ್ಟ್ ಪ್ರಕಾರ ವಸೂಲಿ ಮಾಡುವುದಕ್ಕೆ ವಿಭಾಗಾಧಿಕಾರಿಯವರಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದೇವೆ. ಅದರಂತೆ ಅವರು ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ತಕ್ಕ ಮಟ್ಟಿಗೆ ವಸೂಲಿ ಸಹ ಆಗುತ್ತಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ಥಳೀಯ ಸಂಸ್ಥೆಗಳು ಎಂದರೆ ತಾಲ್ಲೂಕ್ ಬೋರ್ಡ್, ಮುನಿಸಿಪಾಲಿಟಿಗಳು ಮತ್ತು ಪಂಚಾಯಿತಿಗಳು ಸೇರುತ್ತವೆ. ಇಷ್ಟೊಂದು ಬಾಕಿ ಹಣ ಯಾರ ಕಡೆಯಿಂದ ಬರಬೇಕು ಎಂಬುದನ್ನು ಹೇಳುತ್ತೀರಾ?

ಶ್ರೀ ಜಿ. ಬಸವಣಪ್ಪ.—ಬಾಕಿ ಇರುವುದು ಮುನಿಸಿಪಾಲಿಟಿಗಳಿಂದ, ತಾಲ್ಲೂಕ್ ಬೋರ್ಡುಗಳಿಂದ ಮತ್ತು ಎಕ್ಸ್ ಜಿಲ್ಲಾ ಬೋರ್ಡುಗಳಿಂದ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ಮೂರು ವರ್ಷಗಳಲ್ಲಿ ಕೆಲವು ಭಾಗಗಳಲ್ಲಿ ಕ್ಷಾಮ ಬಂದು ಕಂದಾಯವನ್ನು ವಜಾ ಮಾಡಲಾಗಿತ್ತು. ಅದರಂತೆ ವೈದ್ಯಕೀಯ ವಂತಿಗೆಯನ್ನು ಸಹ ವಜಾ ಮೂಡಿ ಇನ್ನೂ ಇಷ್ಟು ಬಾಕಿ ಬರಬೇಕಾಗಿದೆಯೇ ಇಥವಾ ಆ ರೀತಿ ವಜಾ ಮಾಡದಿದ್ದರೆ ಈಗ ಬಾಕಿ ಇರುವುದನ್ನು ವಜಾ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ.

ಶ್ರೀ ಜಿ. ಬಸವಣ್ಣಪ್ಪ.—ಇದರಲ್ಲಿ ೫೦ ಪರಸೆಂಟ್ ಸರ್ಕಾರ ಕೊಡುತ್ತದೆ. ಉಳಿದ ೫೦ ಪರಸೆಂಟ್ ಸ್ಥಳೀಯ ಸಂಸ್ಥೆಗಳು ಕೊಡಬೇಕು. ಅವರ ಭಾಗದ ೫೦ ಪರಸೆಂಟ್ ಅವರು ಕೊಡದಿರುವುದರಿಂದ ಇಷ್ಟೊಂದು ಬಾಕಿ ನಿಂತಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನ್ನ ಪ್ರಶ್ನೆ ಅದಲ್ಲ. ೧೯೬೬ನೇ ಇಸವಿಯಿಂದ ೧೯೬೯ರವರೆಗೆ ರಾಜ್ಯದ ಕೆಲವು ಭಾಗಗಳಲ್ಲಿ ಕ್ಷಾಮ ಬಂದಿದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ಬರಬೇಕಾದ ಆದಾಯ ಬರಲ್ಲಿಲ್ಲ. ಈ ಕಾರಣದಿಂದ ಅವರ ಭಾಗದ ವಂತಿಗೆಯನ್ನು ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಕ್ಷಾಮ ಬಂದಿದ್ದ ಭಾಗಗಳಲ್ಲಿ ಕಂದಾಯವನ್ನು ಕೂಡ ವಜಾ ಮೂಡಿದ್ದೀರಿ ಆದರಂತೆ ವೈದ್ಯಕೀಯ ವಂತಿಗೆಯ ಬಾಕಿಯನ್ನು ಸಹ ವಜಾ ಮಾಡುತ್ತೀರಾ.

ಶ್ರೀ ಜಿ. ಬಸವಣ್ಣಪ್ಪ.—ಆ ರೀತಿ ವಜಾ ಮೂಡಿಲ್ಲ. ಇದರ ಬಗ್ಗೆ ಸೂಕ್ತ ಪರಿಶೀಲನೆ ಕೊಡಲಾಗುತ್ತದೆ.

ಶ್ರೀ ಎನ್. ಜಿ ಹಾಲಪ್ಪ.—ಈಗ ಕೆಲವು ತಾಲ್ಲೂಕ್ ಬೋರ್ಡುಗಳಿಗೆ ತಮ್ಮ ಭಾಗದ ವೈದ್ಯಕೀಯ ವಂತಿಗೆಯನ್ನು ಕೊಡುವ ಸಾಮರ್ಥ್ಯ ಇಲ್ಲ. ಈ ಕಾರಣದಿಂದ ಇಷ್ಟೊಂದು ಬಾಕಿ ಉಳಿಯುವುದಕ್ಕೆ ಕಾರಣವಾಗಿದೆ. ಆದ್ದರಿಂದ ವೈದ್ಯಕೀಯ ಪೂರ್ತ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆ.

ಶ್ರೀ ಜಿ. ಬಸವಣ್ಣಪ್ಪ.—ಸ್ಥಳೀಯ ಸಂಸ್ಥೆಗಳು ಆ ಭಾಗದ ಜನರಿಗೆ ವೈದ್ಯಕೀಯ ಸೌಲಭ್ಯ ಒದಗಿಸಬೇಕಾಗುತ್ತದೆ. ಅದು ಅವರ ಕರ್ತವ್ಯ. ವೈದ್ಯಕೀಯ ವಂತಿಗೆಯನ್ನು ಕೇವಲ ತಾಲ್ಲೂಕು ಬೋರ್ಡಿನವರೇ ಕೊಡುತ್ತಿಲ್ಲ. ಮುನಿಸಿಪಾಲಿಟಿಯವರು ಸಹ ಕೊಡುತ್ತಿದ್ದಾರೆ.

ಶ್ರೀ ಬಾಪುಗೌಡ.—ಈಗ ಎರಡು ಕೋಟಿ ರೂಪಾಯಿಗಳವರೆಗೆ ವಸೂಲಿಯಾಗಬೇಕಾಗಿದೆ. ಎಂದು ಹೇಳಿದ್ದೀರಿ. ಯಾವ ಯಾವ ಸ್ಥಳೀಯ ಸಂಸ್ಥೆಗಳಿಂದ ಇಷ್ಟೊಂದು ಬಾಕಿ ಬರಬೇಕಾಗಿದೆ ಎಂಬುದನ್ನು ಹೇಳುತ್ತೀರಾ.

ಶ್ರೀ ಜಿ. ಬಸವಣ್ಣಪ್ಪ.—ಹೆಸರು ಹೇಳುವುದು ಕಷ್ಟವಾಗುತ್ತದೆ. ಆ ಪಟ್ಟಿಯನ್ನು ಟೇಬಲ್ ಮೇಲೆ ಇಡುತ್ತೇನೆ.

ಶ್ರೀ ಬಿ. ಪರಮೇಶ್ವರಪ್ಪ —ಇವತ್ತು ಕೆಲವು ತಾಲ್ಲೂಕು ಬೋರ್ಡುಗಳು ೩೦ ಸಾವಿರದಿಂದ ೪೦ ಸಾವಿರ ರೂಪಾಯಿಗಳವರೆಗೆ ವಂತಿಗೆ ಕೊಡಬೇಕಾಗಿದೆ. ಆದರೆ ಅಂತಹ ತಾಲ್ಲೂಕ್ ಬೋರ್ಡ್‌ಗಳಿಗೆ ಬರುವ ವರಮಾನ ೨೪ ಸಾವಿರ ರೂಪಾಯಿಗಳಿಂದ ೨೫ ಸಾವಿರ ರೂಪಾಯಿಗಳವರೆಗೆ ಮಾತ್ರ. ಈಗಾಗಲೇ ವೈದ್ಯಕೀಯ ವಂತಿಗೆಯನ್ನು ಕೊಡುವ ಶಕ್ತಿ ನಮಗೆ ಇಲ್ಲ ಎಂದು ಅನೇಕ ತಾಲ್ಲೂಕ್ ಬೋರ್ಡಿನವರು ಒಂದು ರೆಜಲ್ಯೂಷನ್ ಪಾಸ್ ಮಾಡಿ ಸರ್ಕಾರಕ್ಕೆ ಕಳಿಸಿಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ಆ ರೀತಿ ಬಂದಿದ್ದರೆ ವೈದ್ಯಕೀಯ ವಂತಿಗೆ ಬಗ್ಗೆ ವಿನಾಯಿತಿ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಜಿ. ಬಸವಣ್ಣಪ್ಪ.—ಈಗ ಭೂಕಂದಾಯದಿಂದ ಬರತಕ್ಕ ವರಮಾನದಲ್ಲಿ ೬೦ ಭಾಗವನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈ ಕ್ರಮದಿಂದ ಇನ್ನು ಮುಂದೆ ಹಣದ ವಿಚಾರದಲ್ಲಿ ತಾಲ್ಲೂಕ್ ಬೋರ್ಡ್‌ಗಳಿಗೆ ತೊಂದರೆ ಬರುವುದಿಲ್ಲ?

SRI THIRUMALDEVARAYA: —Taluk Boards are running dispensaries and health units and every year they collect contribution from the Government. How much is due to the Taluk Boards from Government?

SRI G. BASAVANNAPPA:—Taluk Boards are due Rs. 1 crore and odd.

ಶ್ರೀ ಎಂ. ನಾಗಪ್ಪ.— ತಾಲ್ಲೂಕ್ ಬೋರ್ಡಿನಿಂದ ಬಾಕಿ ಬರಬೇಕಾಗಿರುವ ಹಣ ಎಷ್ಟು ಎಂದು ಈಗ ಹೇಳಿದಿರಿ. ಶ್ರೀ ತಿರುಮಲದೇವರಾಯರು ಕೇಳಿದ ಪ್ರಶ್ನೆ ಅದಲ್ಲ. ಹೆಲ್ತ್ ಯೂನಿಟ್‌ಗಳನ್ನು ಹೈದರಾಬಾದ್ ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳೇ ನಡಸುತ್ತಿವೆ. ತಮ್ಮ ಭಾಗದ ವಂತಿಗೆಯನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಆದಕಾರಣ ಇದುವರೆಗೆ ಸರ್ಕಾರದವರು ತಮ್ಮ ಭಾಗದ ವಂತಿಗೆಯನ್ನು ಪೂರ್ಣವಾಗಿ ಕೊಟ್ಟಿದ್ದಾರೆಯೇ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡುವುದಕ್ಕೆ ಸಾಧ್ಯವೇ, ಅಥವಾ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೀರ?

SRI G. BASAVANNAPPA:— That figure is not before me. Definitely I am going to place it on the table of the House.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.— ಈಗ ಎರಡು ಕೋಟಿ ೭ ಲಕ್ಷದವರೆಗೆ ಬಾಕಿ ಬರಬೇಕಾಗಿದೆ. ಮತ್ತು ಈ ಬಾಕಿ ವರ್ಷೇ ವರ್ಷೇ ಜಾಸ್ತಿಯಾಗುತ್ತಿದೆ. ಅಲ್ಲದೆ ವಸೂಲಿಯಾಗುತ್ತಿರುವುದು ಕೂಡ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ೧೯೬೮-೬೯ರಲ್ಲಿ ಕೇವಲ ೮ ಲಕ್ಷ ಚಿಲ್ಲರೆ ವಸೂಲಿಯಾಗಿದೆ. ಸರಿಯಾಗಿ ವಸೂಲಿ ಮಾಡುವುದಕ್ಕೆ ತಮ್ಮಲ್ಲಿ ಮಿಷನರಿ ಇಲ್ಲವೇ? ಅಥವಾ ಸ್ಥಳೀಯ ಸಂಸ್ಥೆಗಳಿಗೆ ಕೊಡುವುದಕ್ಕೆ ಶಕ್ತಿ ಇಲ್ಲವೇ? ಈ ಬಗ್ಗೆ ಖಚಿತವಾದ ಕಾರಣ ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ:— ಸೂಕ್ತವಾದ ಮಿಷನರಿ ಇದೆ. ಸೂಕ್ತ ಕ್ರಮವನ್ನು ವಸೂಲಿ ಬಗ್ಗೆ ಕೈಕೊಂಡಿದ್ದೇವೆ. ಆದರೆ ಕೆಲವು ಸ್ಥಳೀಯ ಸಂಸ್ಥೆಗಳು ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ. There is no other go left except to close such dispensaries.

ಶ್ರೀಮತಿ ಕೆ.ಲೀಲಾವತಿ ರೈ:—ಶ್ರೀ ನಾಗಪ್ಪನವರು ಹೇಳಿದಂತೆ ನಮ್ಮ ಸೌತ್‌ಕೆನರಾ ಜಿಲ್ಲೆಯಲ್ಲಿಯೂ ಕೂಡ ಹೆಲ್ತ್ ಯೂನಿಟ್‌ಗಳನ್ನು ತಾಲ್ಲೂಕ್ ಬೋರ್ಡಿನವರೇ ನಡೆಸುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರು

(ಶ್ರೀಮತಿ ಕೆ. ಲೀಲಾವತಿ ರೈ)

ತಿಲ್ಲೂಕ್ ಬೋರ್ಡ್‌ನವರಿಗೆ ಕೊಡುತ್ತಿರುವುದು ೩ ಸಾವಿರ ರೂಪಾಯಿಗಳು. ಇಷ್ಟೊಂದು ಬಾಕಿ ಉಳಿಯುವುದಕ್ಕೆ ಕಾರಣವೇನು ಮತ್ತು ಇಲ್ಲಿ ಕೊಟ್ಟಿರುವ ಅಂಕಿಅಂಶಗಳು ಯಾವ ಯಾವ ಜಿಲ್ಲೆಗಳಿಗೆ ಸಂಬಂಧಪಟ್ಟಿದು ಎಂಬುದರ ವಿವರಗಳನ್ನು ಕೊಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಇದರಲ್ಲಿ ಹಳೆಯ ಬಾಕಿ ಕೂಡ ಸೇರಿದೆ.

## LOCAL CANDIDATES IN REVENUE OFFICES

406. Sri C. R. Range Gowda (Magadi).—

Will the Minister for Revenue be pleased to state:—

(*a*) number of local candidates working in different Revenue Offices in each taluk of Bangaloie District ;

(*b*) since how long they are working ;

(*c*) of them, the number of candidates from the list the candidates retrenched from the department of Survey and Settlement ;

(*d*) the action taken by Government to confirm the candidates in their respective posts ?

Sri H. V. Koujalgi (Minister for Revenue).—

(*a*) 29 (for details kindly see the list appended)

(*b*) As per list appended.

(*c*) None.

(*d*) Government have issued Rules to regularise the services of local candidates appointed prior to 1-1-1965. In respect of others they were advised to apply to the Public Service Commission when vacancies are notified by the Public Service Commission. Those who are selected by the Public Service Commission are being appointed as regular candidates.